(iv) ಮೈಸೂರು ನಗರದ ಸಿದ್ದಾರ್ಥ ಲೇಔಟಿನಲ್ಲಿರುವ ಆಸ್ಪತ್ರೆಯ ಜಾಗವನ್ನು ಪ್ರಭಾವ ಶಾಲಿ ವೈದ್ಯರಿಗೆ ಕೊಡುತ್ತಿರುವ ಬಗ್ಗೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮೈಸೂರು ನಗರದ ಸಿದ್ಧಾರ್ಥ ಲೇ ಔಟಿನಲ್ಲಿ ನಗರಾಭಿವೃದ್ಧಿ ಸಮಿತಿ ಆಸ್ಪತ್ರೆಗಾಗಿ ಜಾಗವನ್ನು ಮೀಸಲಾಗಿಟ್ಟಿದ್ದು ಇದನ್ನು ಪ್ರಭಾವಶಾಲಿ ವೈದ್ಯರೊಬ್ಬರಿಗೆ ಮನೆ ಕಟ್ಟಿಕೊಳ್ಳಲು ಕೊಡುವ ಪ್ರಯತ್ನದ ಬಗ್ಗೆ ಅಲ್ಲಿಯ ನಿವಾಸಿಗಳು ಆತಂಕ ಗೊಂಡಿದ್ದಾರೆ. ಇಲ್ಲಿ ಆಸ್ಪತ್ರೆಯ ಅವಶ್ಯಕತೆ ಇದೆ. ಆದ್ದರಿಂದ ಈ ಜಾಗ ಬೇರೆ ಯಾರಿಗೂ ಕೊಡದಂತೆ ಉಳಿಸಬೇಕೆಂದು ಒತ್ತಾಯಿಸಿ ಸಂಬಂಧಪಟ್ಟ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತೇನೆ. ಅವರು ದೆಹಲಿಗೆ ಹೋಗಿದ್ದಾರೆ. ಬಂದತಕ್ಷಣ ಅವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಏನ್. ಎಚ್. ಗೌಡರು ಬಂದಿಲ್ಲ. ಮಾನ್ಯ ರಾಮಪ್ಪನವರೂ ಬಂದಿಲ್ಲ.

ಶ್ರೀ ಆರ್. ಎನ್. ನಾಯಕ್.—ನಾನು ಓದುತ್ತೇನೆ.

ಅಧ್ಯಕ್ಷರು.—ನೀವು ಓದುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್: ನಾಯಕ್.—ನನ್ನ ಹೆಸರೂ ಅದರಲ್ಲಿದೆ.

ಅಧ್ಯಕ್ಷರು.—ಸಹಿ ಮಾಡಿದ್ದೀರಾ ? ನೋಟೀಸಿಗೆ ಸಹಿ ಮಾಡಿದ್ದರೆ ಅಲೋ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮೂಲ ಪ್ರತಿಯಲ್ಲಿ ಇದೆ.

ಅಧ್ಯಕ್ಷರು.—ಇಲ್ಲದಿದ್ದರೆ ನಿಮಗೆ ಅವಕಾಶ ಕೊಡುವುದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲ,

ಶ್ರೀ ಆರ್. ಎನ್. ನಾಯಕ್.—ಮೂಲ ಪ್ರತಿಯಲ್ಲಿದೆ.

ಅಧ್ಯಕ್ಷರು.—ನಿಮ್ಮ ಹೆಸರಿದೆ. ಆದರೆ ಸಹಿ ಇಲ್ಲ. ಪೆಸರಿರುವುದರಿಂದ ಅವಕಾಶ ಕೊಡುತ್ತೇನೆ ಓದಿ.

(V) ಬಳ್ಳಾರಿ ಪಟ್ಟಣದ ಕುರಬಪ್ಪ ಎಂಬಲ್ಲಿ ರಾತ್ರಿ ದರೋಡೆ ನಡೆದಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್.—ಬಳ್ಳಾರಿ ಪಟ್ಟಣದ ಕುರಬಪ್ಪ ಎಂಬಲ್ಲಿ ದಿನಾಂಕ ೫–೧–೧೯೮೬ ರಂದು ರಾತ್ರಿ ೧೦–೩೦ ಗಂಟೆಗೆ ದರೋಡೆ ನಡೆದಿದೆ. ಸುಮಾರು ೨೫,೦೦೦ ರೂಪಾಯಿಗಳ ಬೆಲೆ ಬಾಳುವ ಸಾಮಾನುಗಳನ್ನು ಅಪಹರಿಸಿದ್ದಾರೆ. ವಂಡೆಯಲ್ಲಿ ವಾಸಿಸುವ ಮನೆ ಮಾಲೀಕ ಹಾಗೂ ಅವರ ಸಹೋದರಿಯನ್ನು ಹೊಡೆದು ಗಾಯಗೊಳಿಸಿದ್ದು ಗಾಯಗೊಂಡ ಮಹಿಳೆ ಇನ್ನೂ ತಪಕ ಪ್ರಜ್ಞಾವಸ್ಥೆಗೆ ಬಂದಿಲ್ಲ.

ಬಳ್ಳಾರಿಯಲ್ಲಿ ಪೋಲೀಸರ ಸಂಖ್ಯೆ ತೀರ ಕಡಿಮೆ ಆಗಿದೆ. ನಮ್ಮಿಂದ ಬಳ್ಳಾರಿಯನ್ನು ರಕ್ಷಿಸುವ ಕೆಲಸ ಸಾಧ್ಯವಿಲ್ಲ ಎಂದು ಅವರು ಹೇಳುತ್ತಿದ್ದಾರೆ. ದಿನಾಂಕ ೫–೧–೧೯೮೬ ರಂದು ನಡೆದ ದರೋಡೆ ಘಟನೆಯಲ್ಲಿ ಇನ್ನೂ ಯಾರನ್ನೂ ಬಂಧಿಸಿಲ್ಲ. ಪೋಲೀಸ್ ನಾಯಿಗಳೂ ಸಹ ಪೋಲೀಸರಷ್ಟೇ ಅಸಹಾಯಕವಾಗಿವೆಯೆಂದು ಜನರಾಡಿಕೊಳ್ಳುತ್ತಾರೆ. ಈ ವಿಚಾರವಾಗಿ ಹೆಚ್ಚಿನ ತನಿಖೆಗೆ ಪ್ರಯತ್ನಿಸುವ ಬಗ್ಗೆ ಸರಕಾರದ ಗಮನ ಸೆಳೆಯಲಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಗೃಹಮಂತ್ರಿಗಳು ಮಂಗಳೂರಿಗೆ ಹೋಗಿದ್ದಾರೆ. ಅವರ ಗಮನಕ್ಕೆ ಈ ವಿಚಾರ ತಿಳಿಸಿ ಉತ್ತರ ಕೊಡಿಸುತ್ತೇನೆ.